**ದಿಃ03.11.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 3ನೇ ಪ್ರತಿವಾದಿ ಪರ ಶ್ರೀ.ಕೆ.ಎಂ.ಕೆ ವಕೀಲರಿಂದ ಃ**

ನೆಲಜಿ ಗ್ರಾಮದಿಂದ ಅಯ್ಯಂಗೇರಿ ಗ್ರಾಮ ಸುಮಾರು 9 ಕಿ.ಮಿ ದೂರದಲ್ಲಿ ಇದೆ. ನೆಲಜಿ ಗ್ರಾಮ ಅಯ್ಯಂಗೇರಿ ಗ್ರಾಮದಿಂದ 15 ಕಿ.ಮಿ ದೂರದಲ್ಲಿ ಇದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ನನಗೆ ಇಬ್ಬರು ಮಕ್ಕಳು ಎಂದರೆ ಸರಿ. ನನ್ನ ಮಕ್ಕಳ ಪೈಕಿ ಒಬ್ಬರು ಹೆಣ್ಣು ಮಗಳು ಮತ್ತು ಮತ್ತೊಬ್ಬರು ಗಂಡು ಮಗ. ನನ್ನ ಮಗಳ ಹೆಸರು ದೀಪಿಕಾ. ನಿಮ್ಮ ಮಗಳ ವಿವಾಹ ಯಾವಾಗ ನೇರೆವರಿದೆ ಎಂದರೆ ಸಾಕ್ಷಿ ನೆನಪಾಗುತ್ತಿಲ್ಲ ಎನ್ನುತ್ತಾರೆ. ನಿಮ್ಮ ಮಗಳ ವಿವಾಹ 2018 ರಲ್ಲಿ ಆಗಿದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ನನ್ನ ಮಗಳ ವಿವಾಹಕ್ಕೆ ನನ್ನ ಮಾವ ಅಯ್ಯಣ್ಣ ಬಂದಿದ್ದರು ಎಂದರೆ ಸರಿ. ನನ್ನ ಮಗಳ ವಿವಾಹ 2 ದಿನಗಳ ಸಮಾರಂಭ ಆಗಿತ್ತು. ನನ್ನ ಮಗಳ ವಿವಾಹದಲ್ಲಿ ನನ್ನ ಮಾವ ಓಡಾಡಿಕೊಂಡು ಇದ್ದರು ಎಂದರೆ ಸಾಕ್ಷಿ ಕಡಿಮೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಅವರಿಗೆ ಕಿವಿ ಕೇಳಿಸುತ್ತಿರಲಿಲ್ಲ ಮತ್ತು ಕಣ್ಣು ಕಾಣಿಸುತ್ತಿರಲಿಲ್ಲ ಎನ್ನುತ್ತಾರೆ. ನಿಮ್ಮ ಮಾವ ಯಾವಾಗ ತೀರಿಕೊಂಡರು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಿಮ್ಮ ಮಾವ ತೀರಿಕೊಳ್ಳುವ 10 ದಿನದ ಮೊದಲು ಅವರು ಆರೋಗ್ಯವಾಗಿ ಇದ್ದರು ಎಂದರೆ ಸರಿಯಲ್ಲ. ಸದರಿಯವರು ತೀರಿಕೊಂಡ ಕೊನೆಯ 10 ದಿನಗಳಿಂದ ಮಾತ್ರ ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಮಾರು ದಿನಗಳ ಕಾಲ ಹಾಸಿಗೆ ಹಿಡಿದಿದ್ದರು ಎನ್ನುತ್ತಾರೆ. ನಿಮ್ಮ ಮಾವ ನಿಮ್ಮ ಮನೆಗೆ ಬಂದು

ಹೋಗುತ್ತಿದ್ದರು ಎಂದರೆ ಸಾಕ್ಷಿ ಸುಮಾರು ವರ್ಷಗಳ ಹಿಂದೆ ಬಂದು ಹೋಗುತ್ತಿದ್ದರು ಎನ್ನುತ್ತಾರೆ. ನಿಮ್ಮ ಮಾವ ಯಾವ ಇಸವಿಯವರೆಗೆ ನಿಮ್ಮ ಮನೆಗೆ ಬಂದು ಹೋಗುತ್ತಿದ್ದರು ಎಂದರೆ ಸಾಕ್ಷಿ ಈಗ ನೆನಪಿಲ್ಲ ಎನ್ನುತ್ತಾರೆ. ನಿಮ್ಮ ಮಾವನ ಮನೆಗೆ ನೀವು, ನಿಮ್ಮ ಪತ್ನಿ ಮತ್ತು ಮಕ್ಕಳು ಹೋಗುತ್ತಿದ್ದೀರಿ ಎಂದರೆ ಸಾಕ್ಷಿ ಸುಮಾರು ವರ್ಷಗಳ ಹಿಂದೆ ಹೋಗುತ್ತಿದ್ದೇವು ಎನ್ನುತ್ತಾರೆ. ದಿಃ06.12.2024 ರಂದು ನಡೆದ 3ನೇ ಪ್ರತಿವಾದಿ ಮನೆಯ ಗೃಹ ಪ್ರವೇಶಕ್ಕೆ ನಾನು, ನನ್ನ ಪತ್ನಿ ಮತ್ತು ಮಕ್ಕಳು ಹೋಗಿದ್ದೇವು ಎಂದರೆ ಸರಿ. ನನ್ನ ಮಗಳ ವಿವಾಹ ಕಾಲಕ್ಕೆ ಫೋಟೋ ಮತ್ತು ವಿಡೀಯೊ ಮಾಡಿಸಿದ್ದೇನೆ. ನಿಮ್ಮ ಮಗಳ ವಿವಾಹ ಸಮಾರಂಭದ ಸಂಬಂಧ ಮಾಡಲಾದ ವಿಡೀಯೊದಲ್ಲಿ ನಿಮ್ಮ ಮಾವ ಓಡಾಡುತ್ತಿರುವುದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ನನ್ನ ಮಗಳ ವಿವಾಹ ಸಮಾರಂಭದಲ್ಲಿ ತೆಗೆದ ಫೋಟೊದಲ್ಲಿ ಮೃತ 1ನೇ ಪ್ರತಿವಾದಿ ತನ್ನ ಮಗಳು ಮತ್ತು ಅಳಿಯನ ಜೊತೆ ನಿಂತಿರುವುದು ಕಂಡು ಬರುತ್ತದೆ ಎಂದರೆ ಸರಿಯಲ್ಲ. 2016 ರಿಂದ ಮೃತ 1ನೇ ಪ್ರತಿವಾದಿ ತಮಗಿದ್ದ ಸಮಸ್ಯೆಗಳಿಗೆ ಚಿಕಿತ್ಸೆ ಪಡೆದಿಲ್ಲ. ಮೃತ 1ನೇ ಪ್ರತಿವಾದಿಗೆ ಕಿವಿ ಯಾವಾಗಿನಿಂದ ಕೇಳ್ಳುತ್ತಿರಲಿಲ್ಲ ಮತ್ತು ಅವರಿಗೆ ಯಾವಾಗಿನಿಂದ ದೃಷ್ಟಿ ಹೀನತೆ ಆಗಿತ್ತು, ಯಾವಾಗಿನಿಂದ ಅವರಿಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ ಹಾಗೂ ಯಾವಾಗಿನಿಂದ ಅವರಿಗೆ ನಡೆಯಲು ಸಾಧ್ಯವಾಗುತ್ತಿರಲಿಲ್ಲ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಈ ದಾವೆ ಹೂಡಿದ ನಂತರ ನನ್ನ ಮಾವನವರೆ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು ಎಂದರೆ ಸರಿಯಲ್ಲ. ಸದರಿಯವರೆ ವಕೀಲರಿಗೆ ಮಾಹಿತಿ ಕೊಟ್ಟು ತನ್ನ ಪರವಾಗಿ ಲಿಖಿತ ಹೇಳಿಕೆ ದಾಖಲಿಸಿದರು

ಎಂದರೆ ಸರಿಯಲ್ಲ. ನನ್ನ ಮಾವನವರಿಗೆ ಕಣ್ಣು ಕಾಣುತ್ತಿರಲಿಲ್ಲ, ಕಿವಿ ಕೇಳಿಸುತ್ತಿರಲಿಲ್ಲ ಮತ್ತು ಅವರಿಗೆ ನಡೆಯಲು ಸಾಧ್ಯವಾಗುತ್ತಿರಲಿಲ್ಲ ಎಂದು ಸುಳ್ಳಾಗಿ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವನವರ ಸಹಿಯನ್ನು ನಾನು ಈ ಹಿಂದೆ ನೋಡಿಲ್ಲ. ಸಾಕ್ಷಿಗೆ ನಿಡಿ.10 ನ್ನು ತೋರಿಸಿ ಅದರಲ್ಲಿ ಇರುವ ನಿಡಿ.10(ಹೆಚ್) ನಿಮಗೆ ಸೇರಿದ ಸಹಿ ಎಂದರೆ ಸಾಕ್ಷಿ ಸಹಿಯನ್ನು ಒಪ್ಪಿರುತ್ತಾರೆ. ನಿಮ್ಮನ್ನು ಮಡಿಕೇರಿಗೆ ಯಾವ ದಿನಾಂಕದಂದು ಕರೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಆದರೆ 8 ವರ್ಷ ಆಗಿದೆ ಎನ್ನುತ್ತಾರೆ. ನಿಮ್ಮನ್ನು ಎಲ್ಲಿಂದ ಮಡಿಕೇರಿಗೆ ಕರೆದುಕೊಂಡು ಬರಲಾಯಿತು ಎಂದರೆ ಸಾಕ್ಷಿ 3ನೇ ಪ್ರತಿವಾದಿ ನಮ್ಮ ಮನೆಗೆ ಜೀಪು ತಂದಿದ್ದರು ಅಲ್ಲಿಂದ ನನ್ನನ್ನು ಜೀಪಿನಲ್ಲಿ ಕರೆದುಕೊಂಡು ಸತೀಶ ಇವರ ಮನೆಗೆ ಹೋಗಿ ಅಲ್ಲಿ ಜೀಪನ್ನು ನಿಲ್ಲಿಸಿ ಸತೀಶ ಇವರ ಕಾರಿನಲ್ಲಿ ನನ್ನನ್ನು ಮಡಿಕೇರಿಗೆ ಕರೆತಂದರು ಎನ್ನುತ್ತಾರೆ. ನಮ್ಮ ಮನೆಗೆ ಭೀಮಯ್ಯ ಒಬ್ಬರೆ ಬಂದಿದ್ದರು. ಸತೀಶ ಇವರ ಮನೆಯಿಂದ ಯಾರೆಲ್ಲಾ ಮಡಿಕೇರಿಗೆ ಬಂದೀರಿ ಎಜಂದರೆ ಸಾಕ್ಷಿ ನಾನು,ಭೀಮಯ್ಯ ಮತ್ತು ಸತೀಶ ಕಾರಿನಲ್ಲಿ ಮಡಿಕೇರಿಗೆ ಬಂದೇವು ಎನ್ನುತ್ತಾರೆ. ನಾವು ಮಡಿಕೇರಿಗೆ 9.30 ರಿಂದ 10.30 ಗಂಟೆಯವರಗೆ ಬಂದೇವು. ಮಡಿಕೇರಿಯಲ್ಲಿ ನಿಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗಲಾಯಿತು ಎಂದರೆ ಸಾಕ್ಷಿ ಭೀಮಯ್ಯ ಇವರು ನನ್ನ ಸಹಿ ಬೇಕು ಎಂದು ನನ್ನಿಂದ 3-4 ಸಹಿಗಳನ್ನು ಪಡೆದರು ಸದರಿ ಕಚೇರಿ ಯಾವುದು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಹಿ ಮಾಡಿದ ಕಚೇರಿ ಮಡಿಕೇರಿಯ ಯಾವ ರಸ್ತೆಯಲ್ಲಿ ಇದೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಭೀಮಯ್ಯ ಇವರು ಸಹಿ ಕೊಡು ಎಂದು

ಕೇಳಿದಾಗ ಯಾವ ವಿಚಾರಕ್ಕೆ ಸಹಿ ಎಂದು ನಾನು ಪ್ರಶ್ನೆ ಮಾಡಿಲ್ಲ. ಸಾಕ್ಷಿ ಮುಂದುವರೆದು ಲೋನ್ ಗೆ ಇರಬಹುದು ಎಂದು ಸಹಿ ಮಾಡಿಕೊಟ್ಟೆ ಎನ್ನುತ್ತಾರೆ. ನೀವು ಸಹಿ ಮಾಡಿದ ಕಾಲಕ್ಕೆ ಸತೀಶ ಎಲ್ಲಿದ್ದರು ಎಂದರೆ ಸಾಕ್ಷಿ ನಾನು ಸಹಿ ಮಾಡಿ ಹೊರಗೆ ಬಂದೆ ಅವರು ಅಲ್ಲೆ ಇದ್ದರು ಎನ್ನುತ್ತಾರೆ. ನೀವು ಸಹಿ ಮಾಡಿ ಎಲ್ಲಿಗೆ ಬಂದರಿ ಎಂದರೆ ಸಾಕ್ಷಿ ನಾನು ಕಚೇರಿಯಿಂದ ಹೊರೆಗೆ ಬಂದು ಕುಳಿತುಕೊಂಡಿದ್ದೆ ಎನ್ನುತ್ತಾರೆ. ಸುಮಾರು 15 ನಿಮೀಷ ಕಾಲ ಸಹಿ ಮಾಡಿದ ಸ್ಥಳದಲ್ಲಿ ಇದ್ದೆ. ಸಾಕ್ಷಿಗೆ ನಿಡಿ.10 ರ ಮುಖಪುಟದ ಹಿಂದಿನ ಪುಟವನ್ನು ತೋರಿಸಿ ಅದರಲ್ಲಿ ಇರುವ ಫೋಟೊ ನಿಮ್ಮ ಮಾವನ ಫೋಟೊ ಎಂದರೆ ಸಾಕ್ಷಿ ನನಗೆ ಸ್ಪಷ್ಟವಾಗಿ ಕಾಣಿಸುತ್ತಿಲ್ಲ ಎನ್ನುತ್ತಾರೆ. ನಿಡಿ.10 ನ್ನು ತೋರಿಸಿ ಅದರಲ್ಲಿ ಇರುವ ಸಹಿ ನಿಮ್ಮ ಸಹಿ ಎಂದರೆ ಸಾಕ್ಷಿ ಸಹಿಯನ್ನು ನೋಡಿ ಒಪ್ಪಿರುತ್ತಾರೆ. ಸಾಕ್ಷಿ ಒಪ್ಪಿದ ಸಹಿಯನ್ನು ಈಗಾಲೇ ನಿಡಿ.10(ಐ) ಎಂದು ಗುರುತಿಸಲಾಗಿದೆ. ನಿಡಿ.10 ರ ಮೇಲೆ ಭೀಮಯ್ಯನವರೆ ನನ್ನ ಸಹಿಯನ್ನು ಮಾಡಿಸಿಕೊಂಡರು. ನಾನು ಸಹಿ ಮಾಡಿದ ಕಚೇರಿಯಲ್ಲಿ ನಾವಲ್ಲದೇ ಮೂರು ಜನರು ಇದ್ದರು. ಸದರಿ ಕಚೇರಿಯಲ್ಲಿ ಇದ್ದ ಮೂರು ಜನ ಕಚೇರಿಯ ಸಿಬ್ಬಂದಿಗಳು.ಕಚೇರಿಯಲ್ಲಿ ಇದ್ದವರ ಬಳಿ ಯಾವ ಕಾರಣಕ್ಕಾಗಿ ಸಹಿ ಪಡೆಯಲಾಗುತ್ತಿದೆ ಎಂದು ನಾನು ವಿಚಾರಿಸಿಲ್ಲ. 3ನೇ ಪ್ರತಿವಾದಿ ನನ್ನನ್ನು ಮಡಿಕೇರಿಗೆ ಕರೆತಂದು 3-4 ಸಹಿಗಳನ್ನು ಪಡೆದರು ಮತ್ತು ನನ್ನ ಮಾವನವರನ್ನು ಅಲ್ಲಿ ನಾನು ನೋಡಲಿಲ್ಲ ಮತ್ತು ನಾನು ಸಹಿ ಮಾಡಿದ ದಾಖಲೆಗೆ ನನ್ನ ಸಮ್ಮುಖದಲ್ಲಿ ನನ್ನ ಮಾವ ಸಹಿ ಮಾಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿ ಬಂದ ನಂತರ 3ನೇ ಪ್ರತಿವಾದಿ ಬಳಿ

ಯಾವ ಉದ್ದೇಶದಿಂದ ಸಹಿ ಪಡೆದರಿ ಎಂದು ವಿಚಾರಿಸಿಲ್ಲ. ನಾನು ವಾದಿಗಳ ಜೊತೆ ಸೇರಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ತಿಳುವಳಿಕೆ ಇದ್ದು 1ನೇ ಪ್ರತಿವಾದಿ ಮಾಡಿರುವ ಉಹಿಲು ನಾಮೆಗೆ 1ನೇ ಸಾಕ್ಷಿದಾರನಾಗಿ ನಿಡಿ.10 ರ ಮೇಲೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ನನ್ನನ್ನು ಮಡಿಕೇರಿಗೆ ಕರೆದುಕೊಂಡು ಬಂದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.